**ದಿನಾಂಕಃ 18.12.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಬಿ ಐ ವಕೀಲರಿಂದಃ**

ಅಪಘಾತದಿಂದ ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಖುದ್ದಾಗಿ ಬೇರೆಯವರ ಸಹಾಯವಿಲ್ಲದೇ ಬಂದಿರುತ್ತೇನೆ. 2016 ರಲ್ಲಿ ಅಪಘಾತವಾಗಿದ್ದು 2023 ರಲ್ಲಿ ಈ ಅರ್ಜಿ ಸಲ್ಲಿಸಿದ್ದು ಇಷ್ಟು ತಡವಾಗಿ ದೂರು ಸಲ್ಲಿಸಲು ಕಾರಣವನ್ನು ಅರ್ಜಿಯಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ದಾಖಲೆಗಳು ಕಳೆದು ಹೋಗಿದ್ದರಿಂದ ತಡವಾಗಿದೆ ಎಂದು ನುಡಿಯುತ್ತಾರೆ. ಎತ್ತಿನ ಗಾಡಿಯಲ್ಲಿ ಚಂದ್ರಪ್ಪ , ಮಂಜುನಾಥ , ರಾಧಮ್ಮ ಮತ್ತು ನಾನು ಹೋಗುತ್ತಿದ್ದೆವು . ಎತ್ತಿನ ಗಾಡಿ ಚಂದ್ರಪ್ಪನಿಗೆ ಸೇರಿದೆ. ಎತ್ತಿನಗಾಡಿಗೆ ಅಳವಡಿಸಿದ್ದ ರಾಗಿ ಮಿಷನ್ ನಮ್ಮ ಊರಿನವರದ್ದಾಗಿರುತ್ತದೆ. ಅಪಘಾತದ ಸ್ಥಳ ವಿ ವಿ ಪುರ ರಸ್ತೆ ಎಂದರೆ ನಿಜ. ಎತ್ತಿನಗಾಡಿಯನ್ನು ರಸ್ತೆಯ ಮಧ್ಯಭಾಗದಲ್ಲಿ ನಿಲ್ಲಿಸಿದ್ದರಿಂದ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಎತ್ತಿನ ಗಾಡಿ ನಿಧಾನವಾಗಿ ರಸ್ತೆಯ ಎಡಭಾಗದಲ್ಲಿ ಹೋಗುತಿತ್ತು ಎಂದು ನುಡಿಯುುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋಗಿಲ್ಲ.

ಆಸ್ಪತ್ರೆಯಲ್ಲಿ ಎಂ ಎಲ್ ಸಿ ಬರೆಸಿರುವ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ. ಅಪಘಾತದಿಂದ ನನ್ನ ತಲೆ ಸೊಂಟ ಮತ್ತು ಮೊಣಕಾಲಿಗೆ ನೋವಾಗಿರುತ್ತದೆ. ಮೊದಲು ಹಿರಿಯೂರಿನಲ್ಲಿ ಚಿಕಿತ್ಸೆ ಪಡೆದು ನಂತರ ದಾವಣಗೆರೆಯ ಆಸ್ಪತ್ರೆಗೆ ಹೋಗಿರುತ್ತೇನೆ. ನನಗೆ ಯಾವುದೇ ಗಾಯಗಳು ಆಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಕೂಲಿ ಕೆಲಸ ಮಾಡಲು ಯಾವುದೇ ದಾಖಲೆಗಳು ಸಿಗುವುದಿಲ್ಲ ಎಂದು ನುಡಿಯುತ್ತಾರೆ. ಟಾಟಾ ಏಸ್ ವಾಹನದ ಚಾಲಕನಿಗೆ ಚಾಲನಾ

ಪರವಾನಿಗೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ವಿಮಾ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು